**<u>ಸಾಕ್ಷಿಯನ್ನು ಇಂದು ದಿನಾಂಕಃ 30-01-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>**

1 ನೇ ಪ್ರತಿವಾದಿ ನನ್ನ ಸಹೋದರಿಯಾಗಬೇಕು. ಪ್ರತೀಕ ಸೀತಾಬಾಯಿಯ ಮಗ. ಪ್ರಸಾದ ಸಹ ಸೀತಾಬಾಯಿರವರ ಮಗ. ದಿಃ 08-11-2021 ನೇ ಇಸವಿಯಿಂದ ನನ್ನ ಮತ್ತು ಪ್ರತಿವಾದಿಯ ಮಧ್ಯ ಸಂಬಂಧ ಚೆನ್ನಾಗಿ ಇರುವುದಿಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ನನ್ನ ಮತ್ತು ಪ್ರತಿವಾದಿಯ ಸಂಬಂಧ ಚೆನ್ನಾಗಿ ಇತ್ತು ಎಂದರೆ ಹೌದು. ಪ್ರಸ್ತುತ ದಾವೆಯನ್ನು ಹೊರತುಪಡಿಸಿ ನನ್ನ , ಸೀತಾಬಾಯಿ ಮತ್ತು ಪ್ರಸಾದರ ಸಂಬಂಧಿತ ಬೇರೆ ದಾವೆಗಳು ಸಹ ಇವೆ. ಸದರಿ ದಾವೆಗಳು ಪ್ರಸಾದನ ಮದುವೆ ಕುರಿತು ಇರುತ್ತವೆ. ಸದರಿ ಪ್ರಸಾದನ ಮದುವೆ ಕುರಿತು ದಾವೆಗಳು ಯಾಕೆ ಇವೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿಗೆ ನೋಟೀಸ್ಸನ್ನು ನೀಡಿದ್ದೆನು. ಸದರಿ ನೋಟಿಸ್ಸನ್ನು ಬರೆಯಲು ಮತ್ತು ಈ ದಾವೆಯನ್ನು ಹೂಡಲು ಕೆಂಪು ವಕೀಲರು ಮಾಹಿತಿ ನೀಡಿರುತ್ತಾರೆ. ಸದರಿ ನೋಟೀಸ್ಸನಲ್ಲಿ ಇರುವ ಮಾಹಿತಿ ಮತ್ತು ಈ ದಾವೆಯ ಮಾಹಿತಿ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸಲ್ಲಿಸಿದ ತಕರಾರಿನ ಬಗ್ಗೆ ಮತ್ತು ಪ್ರತಿವಾದಿ ಹಾಜುರಪಡಿಸಿದ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ನೀಡಿದ ನೋಟೀಸಿಗೆ ಪ್ರತಿವಾದಿಯು ಅಥಣಿಯ ಹೆಚ್.ಎಂ. ಪಾಟೀಲರವರು ಮೂಲಕ ಪ್ರತ್ಯುತ್ತರವನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನದು ಬನಹಟ್ಟಿಯ ಕರ್ನಾಟಕ ಬ್ಯಾಂಕಿನಲ್ಲಿ ಖಾತೆ ಇದೆ ಎಂದರೆ ಹೌದು. ಸಾಕ್ಷಿಗೆ ಸಾಕ್ಷಿಯ ಕರ್ನಾಟಕ ಬ್ಯಾಂಕಿನ ಪಾಸಬುಕ್ಕಿನ ಪ್ರತಿಯನ್ನು ತೋರಿಸಿದ್ದು , ಸದರಿ ಪಾಸಬುಕ್ ನಲ್ಲಿ ಇರುವ ಖಾತೆ ಸಂಖ್ಯೆ ಮತ್ತು ತನ್ನ ಹೆಸರನ್ನು ನೋಡಿ ಒಪ್ಪಿಕೊಂಡಿದ್ದು , ಸದರಿ ದಾಖಲಾತಿಯನ್ನು ನಿಡಿ-1 ಎಂದು ವಾದಿಯ ಪರ ವಕೀಲರ ತಕರಾರಿನ ಮೇರೆಗೆ ಗುರುತಿಸಲಾಯಿತು. ಪವನ ಸದಾಶಿವ ಹಡಗಲಿ ರವರು ಪ್ರತಿವಾದಿಯ ಮಗ ಎಂದರೆ ಹೌದು. ಸದರಿ ಪವನ ಎಂಬುವವರು ಅವರ ಕೆನರಾ ಬ್ಯಾಂಕಿನಲ್ಲಿ ಖಾತೆ ಇದ್ದು ಅದರ ಕುರಿತು ದಾಖಲಾತಿಯನ್ನು ಹಾಜರುಪಡಿಸಿದ್ದು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಪವನ ರವರ ಖಾತೆಯ ವಿವರದ ಪ್ರಕಾರ ದಿಃ 01-02-2022 ರಂದು ರೂ.50,000/- ಮತ್ತು ರೂ.1 ಲಕ್ಷ ಸಾಕ್ಷಿಯ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಪವನ್ ರವರ ಖಾತೆಯಿಂದ ರೂ.50,000/- ಮತ್ತು ರೂ.1 ಲಕ್ಷ ಹಣವನ್ನು ವರ್ಗಾವಣೆಗೊಂಡಿದು, ಸದರಿ ಹಣ ನನಗೆ ಮುಟ್ಟಿರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ಮತ್ತು ಪವನ್ ನಡುವೆ ವ್ಯವಹಾರ ಚೆನ್ನಾಗಿ ಇದ್ದು , ಈ ದಾವೆಯು ನನ್ನ ಸಹೋದರಿಗೆ ನೀಡಿದ ಹಣದ ಕುರಿತು ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ.

2. ಪವನ್ ನಿಗೆ ಯಾವಾಗ ಯಾವಾಗ ಹಣ ನೀಡಿರುತ್ತೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ, ಆದರೆ ಸುಮಾರು 5-6 ವರ್ಷಗಳಿಂದ ನಾನು ಪವನನಿಗೆ ಹಣ ಕೊಡುತ್ತಾ ಬಂದಿದ್ದೇನೆ.

ಪ್ರತಿಸಲ ರೂ.30,000/-, 25,000/- , ರೂ.2,000/- ಒಮ್ಮೆ ರೂ.1000/- ಕೊಡುತ್ತಾ ಬಂದಿರುತ್ತೇನೆ. ಪವನನಿಗೆ ಸದರಿ ಹಣವನ್ನು ಕೊಡುತ್ತಿದ್ದೇನು ಎನ್ನಲು ಯಾವುದೇ ದಾಖಲಾತಿ ಇರುವುದಿಲ್ಲ, ಕಾರಣ ಅವನು ಅಳಿಯನಿದ್ದನು ನಾನು ಕೊಡುತ್ತಿದ್ದೇನು ಎಂದುನುಡಿಯುತ್ತಾರೆ. ನಾನು ಪವನನಿಗೆ ಹಣವನ್ನು ನೀಡುವ ಕುರಿತು ಪ್ರತಿವಾದಿಗೆ ಗೊತ್ತಿರಲಿಲ್ಲ. ಪವನ್ ವೈಯಕ್ತಿಕ ಖರ್ಚು ಇದೆ ಎಂದು ನನ್ನ ಬಳಿ ಹಣ ಕೇಳುತ್ತಿದ್ದನು , ಆಗ ನಾನು ಕೊಡುತ್ತಿದ್ದೆನು. ಪವನ್ ನಿಗೆ ಬೇಕಾದಾಗ ಹಣವನ್ನು ನೀಡುತ್ತಿದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪವನನಿಗೆ ಹಣನ ನೀಡುವ ವಿಷಯ ನಾನು ನಮ್ಮ ವಕೀಲರಿಗೆ ನೋಟೀಸ್ಸನು ಕೊಡುವಾಗ ಮತ್ತು ಈ ದಾವೆಯನ್ನು ಮಾಡುವಾಗ ಹೇಳಿರುತ್ತೇನೆ. ಪ್ರತಿವಾದಿಯು ತನ್ನ ವಕೀಲರ ಮುಖಾಂತರ ನೀಡಿದ ನೋಟೀಸ್ಗೆ ಪ್ರತ್ಯುತ್ತರ ಯರದಲ್ಲಿ ಪ್ರತಿವಾದಿಯು ತನ್ನ ಮಗ ಪವನಿನ ಮುಖಾಂತರ ರೂ.1,00,000/- ಮತ್ತು ರೂ.50,000/- ರಂತೆ ನನಗೆ ಹಣ ನೀಡಿರುವುದಾಗಿ ಬರೆಸಿದ್ದು ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಪ್ರತಿವಾದಿಪತ್ರದಲ್ಲಿಯೂ ಸಹ ಸದರಿ ವಿಷಯವನ್ನು ಬರೆಯಿಸಿದ್ದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ತನ್ನ ಮಗ ಪವನನ ಖಾತೆಯಿಂದ ದಿಃ 01-02-2022 ರಂದು ನನಗೆ ರೂ.1,00,000/- ಮತ್ತು ರೂ.50,000/- ಮರಳಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಯ ಪವನ ಖಾತೆಯ ಮೂಲಕ ಹಣವನ್ನು ಮರಳಿ ನೀಡಿರುವ ಕುರಿತು ಬರೆಸಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಎಷ್ಟು ಹಣ ನನಗೆ ಮರಳಿ ಕೊಟ್ಟಿರುತ್ತಾಳೆ ಎಂದು ಬರೆಯಿಸಿದ್ದರ ಕುರಿತು ನನ್ನ ವಕೀಲರು ನನಗೆ ತಿಳಿಸಿರುತ್ತಾರೆ. ನಮ್ಮ ವಕೀಲರು ಸದರಿ ವಿಷಯವನ್ನು ತಿಳಿಸಿದಾಗ ಪವನನಿಗೆ ನಮ್ಮ ವ್ಯವಹಾರ ಬೇರೆ ಮತ್ತು ಪ್ರತಿವಾದಿಯ ಜೊತೆಗೆ ಇರುವ ವ್ಯವಹಾರ ಬೇರೆ ಎಂಬುದರ ಕುರಿತು ಪ್ರತಿವಾದಿಗಾಗಲಿ ಅಥವಾ ಪವನನಿಗಾಗಲೀ ಯಾವುದೇ ನೋಟೀಸ್ಸನು ನೀಡಿರುವುದಿಲ್ಲ. ದಿಃ 01-02-2022 ರಂದು ರೂ.1,50,000/- ನನಗೆ ಮುಟ್ಟಿದ್ದು ಸದರಿ ಹಣ ಯಾಕೆ ಕೊಟ್ಟಿರುತ್ತೀಯಾ ನಾನು ಪವನನಿಗೆ ವಿಚಾರಿಸಿರುವುದಿಲ್ಲ , ಕಾರಣ ಸದರಿ ಹಣ ಪವನ್ ನನಗೆ ಕೊಡಬೇಕಾಗಿತ್ತು.

3. ಕೈಗಡಪತ್ರವನ್ನು ದಿಃ 08-11-2021 ರಂದು ಬರೆಯಿಸಲಾಗಿತ್ತು. ಸದರಿ ಕೈಗಡಪತ್ರದಲ್ಲಿ ಪ್ರತಿವಾದಿಯು ನನಗೆ ದಿಃ 15-02-2022 ರ ಒಳಗಾಗಿ ಹಣವನ್ನು ಮರಳಿ ಕೊಡುವುದಾಗಿ ಹೇಳಿದ್ದಳು. ದಿಃ 08-11-2021 ರಂದು ನಾನು ಪ್ರತಿವಾದಿಗೆ ರೂ.2 ಲಕ್ಷ ಹಣವನ್ನು ನೀಡಿರುತ್ತೇನೆ. ನಾನು ಸದರಿ ಹಣವನ್ನು ವಕೀಲರ ಸಮಕ್ಷಮ ಕೊಟ್ಟಿರುತ್ತೇನೆ.

**ಪ್ರತಿವಾದಿಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,
Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**